ಏನು ಎಂಬುದನ್ನು ಆದಷ್ಟು ಮಟ್ಟಿಗೆ ತಿಳಿದುಕೊಂಡಿದ್ದೇನೆ. ಕೆಲವು ಕಡೆ ಅಧಿಕಾರಿಗಳ ತಪ್ಪು ಇದೆ. ಕೆಲವು ಕಡೆ ಎಸ್ಟಿಮೇಟ್ ಮಾಡುವುದರಲ್ಲಿ ವಿವರಗಳು ಜಾಸ್ತಿ ಇಲ್ಲದೇ ಅಮಾಂಟ್ ಸ್ಟೆಂಡ್ ಆಗಿಲ್ಲ. ಇನ್ನು ಮುಂದೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿ ಏನು ಹಣ ಕೊಟ್ಟಿದ್ದೇವೆ ಅದನ್ನು ಸಮರ್ಪಕವಾಗಿ ಖರ್ಚು ಮಾಡುವಹಾಗೆ ವ್ಯವಸ್ಥೆ ಮಾಡಿಕೊಡುತ್ತೇವೆ.

ಆಶ್ರಯ ಯೋಜನೆ

90-ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಆಶ್ರಯ ಯೋಜನೆಯನ್ನು ಅನುಷ್ಠಾನಕ್ಕೆ ತರಲು'ಹಸಿರು ವಲಯ' ದ ಸಮಸ್ಯೆಯಿಂದ ನಗರ ಪ್ರದೇಶಗಳಲ್ಲಿ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ, ಅದಕ್ಕೆ ಪರಿಹಾರ ಯೋಚಿಸಿದೆಯೇ?*

ಇ) *ನಗರ ಪ್ರದೇಶ ಬಹುಭಾಗ ಇದ್ದು ಗ್ರಾಮಾಂತರ ಪ್ರದೇಶ ತುಂಬಾ ಕಡಿಮೆ ಇರುವ ವಿಧಾನಸಭಾ ಕ್ಷೇತ್ರಗಳಿಗೆ ಆಶ್ರಯ ಯೋಜನೆಯ 800-200 ರಂತೆ ಹಂಚಬೇಕಾಗಿರುವ ಮನೆಗಳ ಸಂಖ್ಯೆ ವ್ಯತ್ಯಾಸ ಮಾಡಬಹುದೆ?*

ಶ್ರೀ ಕೆ.ಜೆ. ಜಾರ್ಜ್(ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಸರ್ಕಾರಿ ಸುತ್ತೋಲೆ ಸಂಖ್ಯೆ ಹೆಚ್‌ಯುಡಿ 459 ಟಿಟಿಪಿ 91, ದಿನಾಂಕ 30-12-91ರಲ್ಲಿ ಬೆಂಗಳೂರು ಅರ್ಬನ್ ಅಗ್ಲಾಮರೇಷನ್ ಪ್ರದೇಶದಲ್ಲಿ ಮಾತ್ರ'ಆಶ್ರಯ' ಯೋಜನೆಯಡಿಯ ಆರ್ಥಿಕ ದುರ್ಬಲ ವರ್ಗದ ನಿವೇಶನಗಳನ್ನು 'ಹಸಿರು ವಲಯ' ದಲ್ಲಿ ರಚಿಸಲು ಅನುಮತಿ ನೀಡಿದೆ.

ಇ) ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, ಕರ್ನಾಟಕ ಸರ್ಕಾರ ಇಡೀ ರಾಜ್ಯಕ್ಕೆ ಆಶ್ರಯ ಯೋಜನೆಯನ್ನು ತಂದಿದೆ. ಆದರೆ ಇಡೀ ರಾಜ್ಯದ ನಗರ ಪ್ರದೇಶದಲ್ಲಿ ಒಂದು ಸುತ್ತೋಲೆ ಹೊರಡಿಸಿ, ಬೆಂಗಳೂರು ನಗರ ಪ್ರದೇಶಕ್ಕೆ ಮಾತ್ರ ಹಸಿರು ವಲಯದ ಪಟ್ಟಿ ಬರುವ ಜಾಗದಲ್ಲಿ ಕೂಡ ಅನುಮತಿ ನೀಡಿ ನಿವೇಶನ ಹಂಚುವ ವ್ಯವಸ್ಥೆ ಆಗುತ್ತಾ ಇದೆ. ಆದರೆ ಬೇರೆ ಯಾವುದೇ ನಗರದಲ್ಲಿ ಹಸಿರು ವಲಯ ಇರುವ ಕಡೆ ಹಂಚಿಕೆ ಆಗುತ್ತಾ ಇಲ್ಲ. ಇಡೀ ರಾಜ್ಯದಲ್ಲಿ ಯಾವುದೇ ನಗರ ಪ್ರದೇಶದಲ್ಲಿ ಒಂದೇ ಒಂದು ಬಡವರ ಕುಟುಂಬಕ್ಕೆ ಹಂಚಿಕೆ ಆಗಿಲ್ಲ. ನನ್ನ ಕ್ಷೇತ್ರದಲ್ಲಂತೂ ಆಗಿಯೇ ಇಲ್ಲ. ರಾಜ್ಯ ಸರ್ಕಾರ ಈ ಯೋಜನೆ ಬಗ್ಗೆ ಜೋರಾಗಿ ಪ್ರಚಾರ ಮಾಡುತ್ತಾ ಇದೆ. ಕೇವಲ ಬೆಂಗಳೂರು ನಗರದಲ್ಲಿ ಮಾತ್ರ ಏಕೆ ಭೂಮಿ ಹಂಚಿಕೆಯಾಗುತ್ತಿದ್ದು ನಮ್ಮ ಕಡೆ ಏಕೆ ಆಗುತ್ತಿಲ್ಲ ಎಂದು ಜನರು ಕೇಳುತ್ತಿದ್ದಾರೆ.

ಶ್ರೀ ಕೆ.ಜೆ. ಜಾರ್ಜ್: ಅಧ್ಯಕ್ಷರೇ, ಆಶ್ರಯ ಯೋಜನೆ ಅಡಿಯಲ್ಲಿ ಬೆಂಗಳೂರು ನಗರದಲ್ಲಿ ಸುಮಾರು 12 ಮೈಲಿ ಒಳಗೆ ಯಾವುದೇ ಕಾರ್ಯಕ್ರಮ ತೆಗೆದುಕೊಳ್ಳಬಾರದು ಎಂದು ಬ್ಯಾನ್ ಇದೆ. ಆ ಪ್ರಕಾರ ಯಾವುದೇ ನಿವೇಶನ ಬೆಂಗಳೂರಿನಲ್ಲಿ ಇರುವುದಿಲ್ಲ.ಆದ್ದರಿಂದ ಇವತ್ತು ಆ ಕಾನೂನನ್ನು ಬೆಂಗಳೂರಿಗೆ ಸೀಮಿತ ಮಾಡಿದ್ದೇವೆ. ಮತ್ತು ಬೇರೆ ಯಾವುದಾದರೂ ನಗರ ಪ್ರದೇಶದಲ್ಲಿ ತೊಂದರೆ ಅಂಥದ್ದು ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಅದಕ್ಕೆ ಪ್ರತ್ಯೇಕವಾಗಿ ಕಾನೂನನ್ನು ಸಡಿಲಗೊಳಿಸುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ವಿಸ್ತಾರ ಮಾಡಬೇಕು ಎಂದರೆ ಪ್ರತಿಯೊಂದು ಫೈಲನ್ನೂ ಕಳುಹಿಸಬೇಕೆಂದು ಹೇಳುತ್ತಾರೆ. ನಮ್ಮ ಶಿವಮೊಗ್ಗ ನಗರದ ಸುತ್ತಮುತ್ತ ಎಲ್ಲಾ ಕಡೆ ಹಸಿರು ವಲಯ ಆಗಿರುವುದರಿಂದ ಯಾವುದೇ ಒಬ್ಬ ವ್ಯಕ್ತಿಗೆ ಫೈಲ್ ಕಳುಹಿಸಿದರೆ ಭ್ರಷ್ಟಾಚಾರ ನಡೆಯುವ ಅವಕಾಶ ಇದೆ. ಈ ಸ್ಕೀಮ್‌ನಲ್ಲಿ ನಾವು ಜಮೀನುದಾರರಿಂದ ಜಮೀನು ಖರೀದಿ ಮಾಡುವುದಕ್ಕೆ ನಮಗೆ ಅವಕಾಶ ಪೂರ್ಣವಾಗಿ ಕೊಡಬೇಕು. ಶಾಸಕರ ಸಮಿತಿಗೆ ನಾವು ಸಂಪೂರ್ಣ ಅವಕಾಶ ಕೊಟ್ಟರೆ ನಾವು ಸಂಬಂಧಪಟ್ಟವರ ಜೊತೆ ಮಾತನಾಡಿ ಖರೀದಿ ಮಾಡುತ್ತೇವೆ. ನಂತರ ಜಿಲ್ಲಾಧಿಕಾರಿಗಳ ಮುಖಾಂತರ ಹಣವನ್ನು ಬಿಡುಗಡೆ ಮಾಡಬಹುದು. ಇದನ್ನು ವಿಚಾರಣೆ ಮಾಡುತ್ತೀರಾ? ಹಣವನ್ನು ಕಮಿಟಿಗೆ ಬಿಡುಗಡೆ ಮಾಡುತ್ತೀರಾ?

ಶ್ರೀ ಕೆ.ಜೆ. ಜಾರ್ಜ್: ಸಂಬಂಧಪಟ್ಟ ಶಾಸಕರೇ ಆ ಸಮಿತಿಯ ಛೇರ್ಮನ್ ಸಹಾ ಆಗಿದ್ದಾರೆ. ಅವರು ನೇರವಾಗಿ ಅದನ್ನು ನನ್ನ ಬಳಿಗೆ ತಂದುಕೊಡಬಹುದು. ನಾನು ಬೇಗನೆ ಯಾವುದೇ ಒಂದು ಭ್ರಷ್ಟಾಚಾರಕ್ಕೆ ಅವಕಾಶ ಇಲ್ಲದಹಾಗೆ ಆದಷ್ಟು ಬೇಗನೆ ಪರಿಹಾರ ಮಾಡಿಕೊಡುತ್ತೇನೆ.

ಅಧ್ಯಕ್ಷರು: ಶ್ರೀ ಶಿವರಾಮೇಗೌಡರ ಪ್ರಶ್ನೆಯನ್ನು ನೀರಾವರಿ ಇಲಾಖೆಗೆ ವರ್ಗಾಯಿಸಲಾಗಿದೆ. ಹಾಗೂ ಶ್ರೀ ವಾಟಾಳ್ ನಾಗರಾಜ್‌ರವರು ಮಾನ್ಯ ಗೃಹ ಮಂತ್ರಿಗಳಿಗೆ ಕೇಳಬೇಕಾದ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಪಂಜಾಬಿನ ಖೈದಿಗಳನ್ನು ಸ್ಥಳಾಂತರಿಸುವುದು

61-ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಬಂದೀಖಾನೆ ಮತ್ತು ಗೃಹರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಪಂಜಾಬಿನ ಖೈದಿಗಳನ್ನು ಬೆಂಗಳೂರು ಜೈಲಿಗೆ ಸ್ಥಳಾಂತರಿಸಲು ಸರ್ಕಾರ ಒಪ್ಪಿಗೆ ನೀಡಿರುವುದೇ?*

ಆ) *ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಪಂಜಾಬಿನ ಖೈದಿಗಳನ್ನು ಬೆಂಗಳೂರು ಜೈಲಿಗೆ ಸ್ಥಳಾಂತರಿಸುವ ಸಲುವಾಗಿ ರಾಜ್ಯ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಂಡಿರುವರೇ?*

ಇ) *ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಯಾವ ನಿರ್ಣಯವನ್ನು ತೆಗೆದುಕೊಂಡಿರುವುದು.*

ಶ್ರೀ ಡಿ.ಕೆ. ಶಿವಕುಮಾರ್ (ಬಂದೀಖಾನೆ ಮತ್ತು ಗೃಹರಕ್ಷಕ ದಳ ರಾಜ್ಯ ಸಚಿವರು):

ಅ) ಇಲ್ಲ.

ಆ) ಹೌದು.

ಇ) ಪಂಜಾಬಿನ ಖೈದಿಗಳನ್ನಿಡಲು ರಾಜ್ಯದಲ್ಲಿ ಉನ್ನತ ಭದ್ರತಾ ಜೈಲುಗಳು ಇಲ್ಲ ಎಂದು ಕೇಂದ್ರ ಸರ್ಕಾರಕ್ಕೆ ತಿಳಿಸಲಾಗಿದೆ.

ಶ್ರೀ ಎಸ್.ಎಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು ಪಂಜಾಬಿನ ಭಯೋತ್ಪಾದಕರನ್ನು ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಕಳುಹಿಸುವ ನಿರ್ಣಯ ತೆಗೆದುಕೊಂಡಿರುವ ಸಂಗತಿ ನಿಜವೆ?